ಎಂ ವಿ ಸಿ ನಂ. 317/2022

ಪಿ ಡಬ್ಲ್ಯೂ –1

ದಿನಾಂಕಃ 08.01.2025 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ IKM ವಕೀಲರಿಂದ –

ನಾನು ಹೋಗುತ್ತಿದ್ದ ಮೋಟಾರ್ ಸೈಕಲ್ ನನಗೆ ಸಂಬಂಧಪಟ್ಟಿದ್ದು. ಮೋಟಾರ್ ಸೈಕಲ್ ಓಡಿಸಲು ನನಗೆ ಡಿ.ಎಲ್ ಇರಲಿಲ್ಲ ಅಂದರೆಸ ರಿ. ಹಾಗೂ ವಾಹನಕ್ಕೆ ಇನ್ಸೂರೆನ್ಸ್ ಇರಲಿಲ್ಲ ಅಂದರೆಸ ರಿ. ಮಾರುತಿ ಹೋಮಿನ ಕಾರಿನ ಚಾಲಕನಿಗೆ ಡಿ.ಎಲ್ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ಹಾಕಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಹಾಕಿರುವ ದಾಖಲಾತಿಗಳ ಪ್ರಕಾರ ಡಿ.ಎಲ್ ಇರಲಿಲ್ಲ ಎಂದು ನಮೂದು ಮಾಡಿದ್ದಾರೆ ಅಂದರೆಸ ರಿ. ಈ ಅಪಘಾತ ಆದ ನಂತರ ವಾಹನಗಳ ದಾಖಲಾತಿಯನ್ನು ಕೊಡಿ ಎಂದು ನನಗೆ ನೋಟೀಸನ್ನು ಪೊಲೀಸರು ನೀಡಿದ್ದರು, ಅದರಂತೆ ನಾನು ದಾಖಲಾತಿಗಳನ್ನು ಕೊಟ್ಟಿದ್ದೇನೆ ಅಂದರೆ ಸರಿ. ನಾನು ಅಪಘಾತ ದಿನದಂದು ಮದ್ಯ ಸೇವನೆ ಮಾಡಿ ಮೋಟಾರ್ ಸೈಕಲ್ ಅನ್ನು ಓಡಿಸುತ್ತಿದ್ದೆನು ಅಂದರೆಸ ರಿಯಲ್ಲ. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು City Central hospital ನಲ್ಲಿ ಚಿಕಿತ್ಸೆ ಪಡೆದಿದ್ದೇನೆ ಅಂದರೆಸ ರಿ. ನಾನು 6 ನೇ ತರಗತಿ ಕಲಿತಿದ್ದೇನೆ. ಸಾಕ್ಷಿಗೆ ದಾಖಲಾತಿ ತೋರಿಸಿ ಇದರಂತೆ City Central hospital ನಲ್ಲಿಚಿಕಿತ್ಸೆ ಪಡೆದಿದ್ದೀರಾ ಅಂದರೆಸ ರಿ. ದಾಖಲಾತಿಯಲ್ಲಿ ಬರೆದಿರುವ ಮಾಹಿತಿ ಸತ್ಯವಾಗಿದೆ ಅಂದರೆಸ ರಿ. ವೈದ್ಯಾಧಿಕಾರಿಗಳನ್ನು ಕರೆಸಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ ಅಂದರೆ ಸರಿ. ಅಪಘಾತ ಆದ ಕೂಡಲೇ ನಾನು ಮೊದಲು ಸಂತೆಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ಹೋದೆನು. ಅವರು ಚಿಕಿತ್ಸೆ ಕೊಡಲು ಆಗುವುದಿಲ್ಲ ಎಂದು ಬೇರೆ ಕಡೆ ಹೋಗಿ ಎಂದು ತಿಳಿಸಿಲ್ಲ. ನಾನಾಗಿ ನಾನೇ ಹೋಗಿ ಚಿಕಿತ್ಸೆ ಪಡೆದಿದ್ದೇನೆ ಅಂದರೆ ಸರಿ. ಸಿ.ಜೆ ಆಸ್ಪತ್ರೆಯಲ್ಲಿ 2 ದಿನ ನಂತರ ಅಲ್ಲಿಂದ City Central hospital ನಲ್ಲಿ ಚಿಕಿತ್ಸೆ ಪಡೆದು ಕೊಂಡೆನು. ನಾನು ಅಂಗನ್ಯೂನತೆ ಪ್ರಮಾಣ ಪತ್ರ ಸತ್ಯನಾರಾಯಣ ಅವರ ಬಳಿ ಹೋಗಿ ಪಡೆದುಕೊಂಡಿದ್ದೇನೆ ಅಂದರೆ ಸರಿ. ನನ್ನ ಉದ್ದೇಶ ಪೂರ್ವಕವಾಗಿ ತಡವಾಗಿ ದೂರನ್ನು ನೀಡಿದ್ದೇನೆ ಅಂದರೆ ಸರಿಯಲ್ಲ. ಮಾರುತಿ ಓಮಿನಿಯವರು ಪಾಲಿಸಿಯ ಷರತ್ತುಗಳನ್ನು

ಉಲ್ಲಂಘನೆ ಮಾಡಿರುವುದರಿಂದ ನಾವು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಅಂದರೆಸ ರಿಯಲ್ಲ. ನಾನು ಗೋಣಿ ಚೀಲ ವ್ಯಾಪಾರ ಮಾಡಿಕೊಂಡು ತಿಂಗಳಿಗೆ 25 ಸಾವಿರ ಸಂಪಾದನೆ ಮಾಡುತ್ತ ಇದ್ದೆ ಎಂದು ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲ. ಚಿಕಿತ್ಸೆಗೆ 1.5 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲ. ವೈದ್ಯರ ಜೊತೆಗೆ ಶಾಮಿಲಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಅಂದರೆಸ ರಿಯಲ್ಲ. ನನ್ನಿಂದ ಅಪಘಾತ ಆಗಿದೆ ಮಾರುತಿ ಓಮಿನಿಯವರ ತಪ್ಪಿನಿಂದ ಅಪಘಾತ ಆಗಿಲ್ಲ ಅಂದರೆಸ ರಿಯಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ.
ನ್ಯಾಯಾಲಯ, ದಾವಣಗೆರೆ